ವಿಶೇಷವೆಂದರೆ ಇಂಥ ತೀವ್ರ ಆಘಾತದ ಸನ್ನಿವೇಶದಲ್ಲಿ ಈ ಪದ್ಯವು,

ಈ ನಾವು ಕರ್ತಾರರಯ್ಯ,
ಸಿದ್ಧಪೂರ್ವದ ಕವಚಧಾರ ಹೊತ್ತರು ನಾವು
ಭರ್ತಾರರಯ್ಯ, ಭೋಕ್ತಾರರು

'ವಿಧಿ' ಪದ್ಯದಲ್ಲಿ ಬರುವ ಮನುಷ್ಯರ ಪ್ರತಿ ನಿರ್ಮಾಣ ಸಾಮರ್ಥ್ಯದ ಬಗ್ಗೆ ಇಲ್ಲಿಯೇ ಪ್ರಸ್ತಾಪ ಬರುತ್ತದೆ. ಅಂದರೆ ಈ ಹಿಂದೆ ಹೇಳಿದ ಹಾಗೆ ಒಂದು ತಾತ್ವಿಕ ನಂಬುಗೆ ಇನ್ನೊಂದನ್ನು ತಳ್ಳಿಹಾಕುವುದಿಲ್ಲ. ಬದಲಾಗಿ ಎರಡೂ ನಂಬುಗೆಗಳ ಬಗ್ಗೆ ಹೆಚ್ಚು ದಟ್ಟವಾದ, ಸಂಕೀರ್ಣವಾದ ತಿಳಿವಳಿಕೆಯು ಸಾಧ್ಯವಾಗುತ್ತದೆ. 'Incremental thickening of awareness' ಎಂದು ಹೇಳುತ್ತಾರಲ್ಲ ಹಾಗೆ. ವಿಶ್ವದ ನಿಯಮಗಳು ಅಜ್ಞಾತ, ಬರಿ ಅನುಮೇಯ ಎನ್ನುವ ತಿಳಿವಳಿಕೆ ಬರುತ್ತದೆ. ಎಷ್ಟು ಕೂಗಿದರೂ ನಿರುತ್ತರವಾದ ಈ ವಿಶ್ವದಲ್ಲಿ ನಿಂತ,

ಹುಟ್ಟಿಸಿದೆ ಏಕೆ ಜೀಯಾ? ದ್ವಂದ್ವಮಯ ಸೃಷ್ಟಿ
ಏಕೆ ಈ ಕ್ಷಣಿಕ ಜಾಗೃತಿ, ಮತ್ತೆ ಇದನಿಳಿಸಿ ಏಕೆ ಶಾಶ್ವತ ಸುಪ್ತಿ
ಏಕೆ ಬಿಟ್ಟಿಹೆ ನಮ್ಮನಿಲ್ಲಿ ಕೊನೆಮೊದಲುಗಳ ಬಗೆಗೆ ಕಣ್ಣುರುಡ
ಕಟ್ಟಿ?

ಇದು ತಂದು ಅಂಧಕಾರದಲ್ಲಿ ನಿಲ್ಲಿಸಿದಾಗ ತಂದೆಯು ಮಾಡಿದಂತೆ 'ನೀ ಕೊಟ್ಟ ಇದ; ಮತ್ತ ನೀನ ಇದ ಮರಳಿ ಕೋ' ಎಂದು ನಿರ್ಧರಿಸಬಹುದು.

ಮುಂದೆ ಸ್ವತಃ ಚಿತ್ತಾಲರಿಗೇ ಪಾರ್ಕಿನ್‌ಸನ್ ವ್ಯಾಧಿ ತಗುಲಿದಾಗ ಅವರು ಅನುಭವಿಸಿದ ನೋವುಗಳು ಮತ್ತೆ ಈ ಪ್ರಶ್ನೆಯನ್ನು ಕೆದಕುತ್ತವೆ. ಸದೃಢ ಸುಂದರ ಕಾಯದ ಗಂಗಾಧರ ಚಿತ್ತಾಲರಿಗೆ ಈ ವ್ಯಾಧಿ ಬಂದದ್ದು ಅನಿರೀಕ್ಷಿತ ಹಾಗೂ ಅತಾರ್ಕಿಕವೆನಿಸುತ್ತದೆ; ಅವರನ್ನು ಪರೀಕ್ಷಿಸಿದ ವೈದ್ಯರಿಗೆ ಕೂಡ. ಅವರ ಪ್ರಕಾರ, ಹೀಗೆ ಅವರಿಗೆ ಆದದ್ದರ ಕಾರಣವೇನು ಎನ್ನುವುದನ್ನು ಸೃಷ್ಟಿಕರ್ತನೊಬ್ಬನೇ ಬಲ್ಲ. ವೈದ್ಯರ ವಿವರಣೆ ಪ್ರಕಾರ, ಇದು ಕ್ರಮೇಣವಾಗಿ ನಿಧಾನವಾಗಿ ಹೆಚ್ಚಾಗುತ್ತಾ ಯಾವ ಅಂಗವೈಕಲ್ಯ ತರುತ್ತದೆ ಎಂದು ಹೇಳಲಾಗದು. ಆದರೆ ಅದು ತಾನಾಗಿ ಎಂದೂ ಕೊಲ್ಲುವುದಿಲ್ಲ. ಇದನ್ನು ಕೇಳಿದ ಅವರಿಗೆ ಅನ್ನಿಸುವುದು:

ಇದು ತಜ್ಞರ ವರದಿಯೋ? ಮೇಲಿಂದ ಬಂದ
ಆಮರಣ ದೇಹ ದಂಡನೆಯ ಫರ್ಮಾನೋ?
.................




**ಎಪ್ಪತ್ತೆರಡು ಕವಿತೆಗಳು ಹಾಗೂ ವಿಮರ್ಶಕರ ಸ್ಪಂದನ**
ಬೆಲೆ: ₹ 495
ಪ್ರ: ಪ್ರಿಸಮ್ ಬುಕ್ಸ್,
ಬೆಂಗಳೂರು.
ಫೋನ್: 080–26714108